ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಮೂರು ಕೆರೆಗಳು ಒಟ್ಟಿಗೆ ಸೇರಿದರೆ 5 ಲಕ್ಷ ಕ್ಯೂಬಿಕ್ ಮೀಟರ್‌ನಷ್ಟು ಆಗುತ್ತದೆ.

ಶ್ರೀ ಪಿ.ಸಿ. ಮೋಹನ್ : ಮಾನ್ಯ ಅಧ್ಯಕ್ಷರೇ, ಈ 5 ಲಕ್ಷ ಕ್ಯೂಬಿಕ್ ಮೀಟರ್ ಹೂಳನ್ನು ಎತ್ತಬೇಕೆಂದರೆ, ಸುಮಾರು ಒಂದು ಲಾರಿಗೆ 10 ಕ್ಯೂಬಿಕ್ ಮೀಟರ್ ಎಂದು ಆದರೂ, ಪ್ರತಿದಿವಸ 200 ಕ್ಯೂಬಿಕ್ ಮೀಟರ್ ಹೋಗುತ್ತಿದೆ, ಇದು 200 ಕ್ಯೂಬಿಕ್ ಮೀಟರ್ ಅಂದರೆ ಒಂದು ತಿಂಗಳಿಗೆ 60,000 ಕ್ಯೂಬಿಕ್ ಮಿಟರ್ ಗಳಾಗುತ್ತದೆ. ಈ ಮೂರು ತಿಂಗಳುಗಳಲ್ಲಿ ಎತ್ತಿರತಕ್ಕ ಹೂಳು ಒಂದು ಲಕ್ಷದ ಎರಭತ್ತು ಸಾವಿರ ಕ್ಯೂಬಿಕ್ ಮೀಟರ್‌ಗಳೆಂದು ನಾನು ಹೇಳಲಿಚ್ಛಿಸುತ್ತೇನೆ. ಇನ್ನು ಉಳಿದಂಥಾದ್ದು ಎತ್ತಿಲ್ಲವೆಂಬುದು ನನ್ನ ಅನಿಸಿಕೆ.

ಶ್ರೀ ಎಸ್. ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ, ಅನಿಸಿಕೆಗೆ ಆಧಾರವಿಲ್ಲ.

ಸೇಡಂ ಪುರಸಭೆಯ ವಾರ್ಡ್ ನಂ. 4 ರಲ್ಲಿ ಕಾಮಗಾರಿಗಳ ಬಾಕಿ ಬಿಲ್ ಪಾವತಿಸದಿರುವ ಬಗ್ಗೆ

588 (5025) : ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಪುರಸಭೆಯ ವಾರ್ಡ್ ನಂ.4 ರಲ್ಲಿ ಒಳಚರಂಡಿ ಹಾಗೂ ಸಿಸಿ ರಸ್ತೆ ಮತ್ತು ಪುರಸಭೆಯ ಮುಂದಿರುವ ಮಳಿಗೆಗಳು ಪೂರ್ತಿಯಾದರೂ ಸಹ ಬಿಲ್ ಹಣ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಕಾಮಗಾರಿಗಳು ಯಾವ ಶೀರ್ಷಿಕೆಯಡಿಯಲ್ಲಿ ಹಾಗೂ ಯಾವಾಗ ಮಂಜೂರಾಗಿದೆ; ಹಾಗೂ ಪೂರ್ತಿಯಾಗಿರುವುದು ಯಾವಾಗ;

ಇ) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು; ಒಂದೊಂದು ಕಾಮಗಾರಿಯ ಪ್ರತ್ಯೇಕ ವಿವರ ನೀಡುವುದು; ಇಲ್ಲಿಯವರೆವಿಗೂ ನೀಡಿರುವ ಹಣ ಎಷ್ಟು; ಬಾಕಿ ಇರುವ ಹಣ ಎಷ್ಟು;

ಈ) ಕಾಮಗಾರಿಗಳು ಪೂರ್ತಿಯಾದರೂ ಸಹ ಗುತ್ತಿಗೆದಾರರಿಗೆ ಬಾಕಿ ಇರುವ ಹಣ ಪಾವತಿಸದಿರಲು ಕಾರಣವೇನು; ಈ ಹಣ ಗುತ್ತಿಗೆದಾರರಿಗೆ ಪಾವತಿಸುವುದು ಯಾವಾಗ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ಸಚಿವರು):

ಅ) ಹೌದು.

ಆ) 1) ವಾರ್ಡ್ ನಂ.4 ರಲ್ಲಿ ಚರಂಡಿ ಹಾಗೂ ಸಿ.ಸಿ. ರಸ್ತೆ ಕೆಲಸಗಳನ್ನು ಪುರಸಭೆ ನಿಧಿಯಿಂದ ಕೈಗೊಳ್ಳಲಾಗಿದೆ. ಕೆಲಸದ ಆದೇಶಕ್ಕೆ ದಿನಾಂಕ: 7.4.2003 ದಂದು ಮಂಜೂರಾತಿ ನೀಡಲಾಗಿದೆ. ಈ ಕೆಲಸ ಪೂರ್ತಿಯಾಗಿ 3 ತಿಂಗಳುಗಳಾಗಿವೆ.

2) 10ನೇ ಹಣಕಾಸು ಯೋಜನೆಯಡಿಯಲ್ಲಿ 22 ಮಳಿಗೆಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಈ ಕೆಲಸಕ್ಕೆ ದಿನಾಂಕ: 4.9.2000 ದಂದು ಮಂಜೂರಾತಿ ನೀಡಲಾಗಿದ್ದು, ಕಳೆದ ವರ್ಷ ಪೂರ್ಣಗೊಂಡಿದೆ.

ಇ) ಈ ಕಾಮಗಾರಿಗಳ ಅಂದಾಜು ವೆಚ್ಚದ ವಿವರ ಈ ಕೆಳಕಂಡಂತಿದೆ:

	ವಾರ್ಡ್ ನಂ.4 ಚರಂಡಿ	ರೂ. 58500.00
	ವಾರ್ಡ್ ನಂ.4 ಸಿ.ಸಿ. ರಸ್ತೆ	ರೂ. 35000.00
8	ಸಂಕೀರ್ಣ ಮಳಿಗೆ ಭಾಗ–1	ರೂ. 395000.00
7	ಸಂಕೀರ್ಣ ಮಳಿಗೆ ಭಾಗ–2	ರೂ. 400000.00
7	ಸಂಕೀರ್ಣ ಮಳಿಗೆ ಭಾಫ್–3	ರೂ. 530000.00
	ಒಟ್ಟು	**ರೂ. 1418500.00**

ಒಂದೊಂದು ಕಾಮಗಾರಿಯನ್ನು ಪ್ರತ್ಯೇಕವಾಗಿ ನೀಡಲಾಗಿದೆ.

ಇಲ್ಲಿಯವರೆಗೆ ಗುತ್ತಿಗೆದಾರರಿಗೆ ಪಾವತಿಸಿದ ಹಣ ರೂ. 9,21,746.00.

ಇನ್ನೂ ಬಾಕಿ ಉಳಿದ ಹಣ ರೂ. 4,08,500.00

ಈ) ಈ ಕಾಮಗಾರಿಗೆ ಬಾಕಿ ಇರುವ ಹಣವನ್ನು ಪುರಸಭೆ ನಿಧಿಯಿಂದ ನೀಡಬೇಕಾಗಿದೆ. ಪುರಸಭೆ ಆರ್ಥಿಕ ಪರಿಸ್ಥಿತಿ ಚನ್ನಾಗಿರದ ಕಾರಣ ಹಣ ಪಾವತಿಸಿಲ್ಲ. ಮುಂದೆ ಹಂತ ಹಂತವಾಗಿ ಪಾವತಿಸಲಾಗುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವಂತಹ ಮೊದಲನೇ ಪ್ರಶ್ನೆ ಸೇಡಂ. ಪುರಸಭೆಯ ವಾರ್ಡ್ ನಂ.4ರಲ್ಲಿ ಒಳಚರಂಡಿ ಹಾಗೂ ಸಿಸಿ ರಸ್ತೆ ಮತ್ತು ಪುರಸಭೆಯ ಮುಂದಿರುವ ಮಳಿಗೆಗಳು ಪೂರ್ತಿಯಾದರೂ ಸಹ ಇನ್ನೂ ಬಿಲ್ ಹಣ ಪಾವತಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು. ಅದಕ್ಕೆ ಹೌದು, ಎಂದು ತಿಳಿಸಿರುತ್ತಾರೆ, ಈ ಸಿಸಿ ರಸ್ತೆಗಳು ಪುರಸಭೆಯ ನಿಧಿಯಿಂದ ಮಂಜೂರಾಗಿ, ಮತ್ತೆ 10ನೇ ಹಣಕಾಸು ಯೋಜನೆಯಲ್ಲಿ ಮಂಜೂರಾತಿ ಪಡೆದುಕೊಂಡು ಮಳಿಗೆಗಳು ಪೂರ್ಣವಾಗಿವೆ, ಇವು ಪೂರ್ಣವಾಗಿ ಒಂದು ವರ್ಷವಾದರೂ ಇನ್ನೂ ಬಿಲ್ ಪೇಮೆಂಟ್ ಆಗಿಲ್ಲ ಏಕೆ? ಮತ್ತೆ ಇಲ್ಲಿಯವರೆಗೂ ಬಿಲ್ ಪೇಮೆಂಟ್ ಆಗಿದ್ದರೆ, ಆ ಮಳಿಗೆಗಳ ಠೇವಣಿ ಮತ್ತು ಕಿರಾಯಿ ಹಣ ಪುರಸಭೆಗಳಿಗೆ ಆದಾಯವಾಗುತ್ತಿತ್ತು. ಅಲ್ಲವೇ?

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇದು ಮುನಿಸಿಪಾಲಿಟಿಯಿಂದ ತೆಗೆದುಕೊಂಡಿರುವಂತಹ ಕೆಲಸ, ಅದಕ್ಕೆ ಅವರೇ ಹಣವನ್ನು ಕ್ರೋಢೀಕರಿಸಿಕೊಳ್ಳಬೇಕು, ಈಗಾಗಲೇ ಅವರು ಮೊದಲನೆಯ ಹಂತದಲ್ಲಿ 58 ಸಾವಿರ ರೂಪಾಯಿಗಳಿಗೆ ಮತ್ತೆ 35 ಸಾವಿರ ರೂಪಾಯಿಗಳಿಗೆ ಮುನಿಸಿಪಾಲಿಟಿಯಿಂದಲೇ ಕ್ಲಿಯರ್ ಮಾಡಿ, ಟೆಂಡರ್ ಮಾಡಿಕೊಳ್ಳುವಂಥಾದ್ದು, ಉಳಿದಿರುವಂಥ ಹಣವನ್ನು ಅವರೇ ಕ್ರೋಢೀಕರಿಸಿಕೊಂಡು ಅವರೇ ಬಿಲ್ ಪಾವತಿ ಮಾಡುವಂತಹ ಅವಶ್ಯಕತೆ ಇದೆ.

ಶ್ರೀ ಬಸವಂತರೆಡ್ಡಿ ಮೋತ್ಕಪಲ್ಲಿ : ಮಾನ್ಯ ಅಧ್ಯಕ್ಷರೇ, ಒಟ್ಟು ಹಣ 14,18,500.00 ರೂಪಾಯಿಗಳು, ಇದರಲ್ಲಿ ಕೇವಲ 9,21,746 ರೂಪಾಯಿಗಳು ಪೇಮೆಂಟ್ ಆಗಿದೆ, ಇನ್ನು ಉಳಿದಂತಹ ಹಣ ಕಳೆದ ಒಂದು ವರ್ಷದಿಂದ ಸುಮಾರು ಐದು ಲಕ್ಷ ರೂಪಾಯಿಗಳ ಕೆಲಸ ಪೂರ್ಣವಾದರೂ ಗುತ್ತಿಗೆದಾರರಿಗೆ ಪೇಮೆಂಟ್ ಆಗಿಲ್ಲವೆಂದರೆ, ಮುಂದೆ ಈ ಪುರಸಭೆಗಳಿಗೆ ಕೆಲಸ ಮಾಡಲು ಯಾರು ಬರುತ್ತಾರೆ? ಆದುದರಿಂದ ಈ ಗುತ್ತಿಗೆದಾರರಿಗೆ ಹಣವನ್ನು ಪೇಮೆಂಟ್ ಆಗುವ ಹಾಗೆ ಮಾಡುವಂತೆ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೋಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ಇದು 10ನೇ ಹಣಕಾಸು ಯೋಜನೆಯಡಿಯಲ್ಲಿ ತೆಗೆದುಕೊಂಡಿರುವಂತಹ ಕೆಲಸ ಈಗಾಗಲೇ ಇದಕ್ಕೆ 3 ಲಕ್ಷದ 25 ಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಇವರು ಖರ್ಚು ಮಾಡಿಕೊಂಡಿದ್ದಾರೆ. ನಾನು ಮುನಿಸಿಪಾಲಿಟಿಯವರಿಗೆ ಅದನ್ನು ತತ್‌ಕ್ಷಣ ಕ್ರೋಢೀಕರಿಸುವುದಕ್ಕೆ ಡೈರಕ್ಷನ್ ಕೊಡುತ್ತೇನೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೇ, ಮೈಸೂರು ನಗರ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು, ಅದರ ಒಂದು ಪ್ರಾದಿಕಾರ ನೂರು ವಸಂತಗಳನ್ನು ದಾಟಿ ನೂರ ಒಂದನೇ ವಸಂತಕ್ಕೆ ಬರುವಂತಹ ಕಾಲ ಸನ್ನಿಹಿತವಾಗುತ್ತಿದೆ. ಅದರಲ್ಲಿರುವಂತಹ 250 ಜನರು ಸಿ ಅಂಡ್ ಆರ್ ರೂಲ್‌ಗೆ ಅಪ್ಲೈ ಮಾಡಿದರೆ, ಅದು ತೀರ್ಮಾನವಾಗದೇ, ಇದು ಬರೀ ಅರಣ್ಯರೋಧನವಾಗಿದೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಇದನ್ನು ವಾಲೆಂಟರಿ ರಿಟೈರ್ ಮೆಂಟ್ ವಿಷಯವೆಂದು ತಿಳಿದು ಉತ್ತರವನ್ನು ಓದಗಿಸಲಾಗಿದೆ, ಎಂದು ಹೇಳೀದೆ, ಇದಕ್ಕೆ ನಾನು ಉತ್ತರವನ್ನು ಕೊಡುವುದಿಲ್ಲ, ಸಂಬಂಧಪಟ್ಟ ಮಂತ್ರಿಗಳು ಬರುತ್ತಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಂತ್ರಿಗಳೇ ಇಲ್ಲವಲ್ಲ!

– ಗೊಂದಲ –

ಅಧ್ಯಕ್ಷರು : ಸಂಬಂಧಪಟ್ಟಂಥ ಮಂತ್ರಿಗಳು ಬರುತ್ತಿದ್ದಾರೆ: ಅವರು ಬಂದ ನಂತರ ಉತ್ತರಿಸುತ್ತಾರೆ.

ಶ್ರೀ ಎಸ್.ಎಂ. ಕೃಷ್ಣ : ಉಮೇಶ್ ಕತ್ತಿಯವರನ್ನು ಕರೆದಿದ್ದರು, ಅವರು ಬಂದಿರಲಿಲ್ಲ, ನಾನು ಬಂದಿದ್ದೆ, ಹಾಗೆ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ತಾವು ಸ್ವಲ್ಪ ಸಹಿಸಿಕೊಳ್ಳುವುದನ್ನು ಕಲಿತುಕೊಳ್ಳಬೇಕು, ಈಗ ಕಲಿಯದೆ ಮತ್ತೆ ಯಾವಾಗ ಕಲಿಯುತ್ತೀರಿ?

ಕೊಳಚೆ ಪ್ರದೇಶಗಳಲ್ಲಿ ಬಾಂಗ್ಲಾ ದೇಶೀಯರ ಸೇರ್ಪಡೆ

591 (5112) : ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳ ಮಧ್ಯೆ ಕೆಲವು ವಿದೇಶಿ ನಾಗರೀಕರು ಇರುವುದು ಸರ್ಕಾರಕ್ಕೆ ವರದಿ ಬಂದಿದೆಯೆ;

2) ಬಂದಿದ್ದಲ್ಲಿ ಇದಕ್ಕೆ ಕಾರಣರಾರು? ಇಂತಹ ಬಾಂಗ್ಲಾ ದೇಶಿಯರನ್ನು ಗುರುತಿಸಿ ಪತ್ತೆ ಮಾಡಲಾಗಿದೆಯೇ. ಅವರೆಲ್ಲಾ ಅಕ್ರಮವಾಗಿ ರಾಜ್ಯಕ್ಕೆ ಹೇಗೆ ನುಸುಳಿದರು.

3) ಇತ್ತೀಚೆಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ಲಗ್ಗೆರೆಗೆ ಸ್ಥಳಾಂತರಿಸಿದ ವಸಂತನಗರ ಕೊಳಚೆ ಪ್ರದೇಶದ ನಿವಾಸಿಗಳಲ್ಲಿ ಬಾಂಗ್ಲಾ ದೇಶಿಯರು ಇದ್ದುದು ನಿಜವೇ; ಇದು ಹೇಗೆ ಬೆಳಕಿಗೆ ಬಂದಿದೆ.

4) ಅಕ್ರಮವಾಗಿ ನುಸುಳಿದ ಬಾಂಗ್ಲಾ ದೇಶಿಯರಿಗೆ ಕೊಳಚೆ ನಿರ್ಮೂಲನಾ ಮಂಡಳಿಯಿಂದ ನಿರ್ಮಿಸಿದ ಮನೆಗಳನ್ನು ವಿತರಿಸಿ ಹಂಚಿಕೆ ಮಾಡಲಾಗಿದೆಯೇ.

5) ಇವರು ಬಾಂಗ್ಲಾ ದೇಶಿಯ ಪ್ರಜೆಗಳಾಗಿದ್ದಲ್ಲಿ ಭಾರತೀಯ ದಾಖಲೆಗಳನ್ನು ಹೇಗೆ ಪಡೆದರು; ಇದರಲ್ಲಿ ಯಾರ ಕೈವಾಡ ಇದೆ ಎಂದು ಶಂಕಿಸಲಾಗಿದೆ;